ಹೋದರೆ ಏನೂ ಕಳಕೊಳ್ಳೋದಿಲ್ಲ...' ಅಂದ. ಆದರೂ ನಾನು ಹೊರಟೆ. 'ಶ್ರದ್ಧಾ ಒಬ್ಬಳೇ ಇರ್ತಾಳೆ...' ಅಂದು ನನ್ನ ಬೈಕ್ ಸ್ಟಾರ್ಟ್ ಮಾಡಿದೆ.

ಬೈಕ್ ನಿಲ್ಲಿಸಿ ಅಲ್ಲೇ ಪಡಸಾಲೆಯಲ್ಲೇ ಶ್ರದ್ಧಾಳ ಜೊತೆ ಕುಳಿತೆ. 'ಏನು ಇಷ್ಟೊಂದು ಖುಷಿ?' ಕೇಳಿದಳು.

'ನೀವು ಹೆಣ್ಣು ಮಕ್ಕಳು ವಿದ್ಯಾವಂತರಾಗುತ್ತೀರಿ. ಆದರೆ ವಿವಾಹದ ನಂತರ ಗೃಹಿಣಿಯಾದರೆ ಓದಿದ್ದೆಲ್ಲ ವೇಸ್ಟ್ ಅನ್ನಿಸಿ ಏನೋ ಕಳೆದುಕೊಂಡೆವು ಅಂದುಕೊಳ್ತೀರ... ಉದ್ಯೋಗಕ್ಕೆ ಹೋದರೆ ಗೃಹಿಣಿಯಾಗಿ ನಾನು ಸರಿಯಾಗಿ ಕೆಲಸ ಮಾಡ್ತಿಲ್ಲ ಅಂತ ಅಲ್ಲೂ ಕೂಡ ಏನೋ ಕಳೆದುಕೊಂಡೆವು ಅಂದುಕೊಳ್ತೀರ... ಆಮೇಲೆ ಗಂಡಂದಿರ ಪ್ರೀತಿಯಲ್ಲಿ ಕೊರತೆ ಹುಡುಕುತ್ತಾ ನೆಮ್ಮದಿ ಹಾಳು ಮಾಡಿಕೊಳ್ತೀರ. ...ನಿಮ್ಮ ಜೊತೆ ಹೇಗೆ ಹೊಂದಿಕೋಬೇಕು ನಾವು?' ಮಹತ್ತರ ಪ್ರಶ್ನೆಯನ್ನು ಅವಳಿಗೆ ರವಾನಿಸಿ ಗಂಭೀರನಾದವನಂತೆ ಕುಳಿತೆ.

'ಓಹೋ... ಈಗ ಇಷ್ಟು ಹೊತ್ತೂ ಸಮುದ್ರ ತೀರ ಇದನ್ನೇನಾ ನಿಮಗೆ ತಿಳಿಸಿದ್ದು!... ನೀವು ಗಂಡಸರೇನು ಕಡಿಮೆ. ನಾವು ಓದದೇ ಇದ್ರೆ ಮದುವೆಗೆ ಒಪ್ಪುತ್ತೀರಾ? ಇಲ್ಲವಲ್ಲ... ಬಿ.ಇ., ಎಂ.ಇ. ಅಂತ ವಾಂಟೆಡ್ ಕಾಲಂನಲ್ಲಿ ಹಾಕೋ ತರಹ ಕೇಳ್ತೀರಾ!' ಛೇಡಿಸಿದಳು.

'ಹೌದೂ... ಆದರೇ... ಅದು... ಏನಂದರೆ...' ಉತ್ತರ ತಿಳಿಯದೇ ತಡವರಿಸಿದೆ.

ನಕ್ಕು ಕೂದಲು ಜಗ್ಗಿದಳು. 'ನಾನೇ ಉತ್ತರ ಹೇಳ್ತೀನಿ ಕೇಳಿ...' ಎಂದು ಜೋರಾಗಿ ನಗತೊಡಗಿದಳು. ನಾನೂ ಅವಳ ಜೊತೆ ದನಿ ಸೇರಿಸಿದೆ.

ನಗುತ್ತಲೇ ಅವಳ ಮುಖ ನೋಡಿದೆ... ಉತ್ತರಕ್ಕಾಗಿ... ಚಂದ್ರನ ಬೆಳದಿಂಗಳು ಅವಳಮುಖದಲ್ಲಿ ಹರಡಿತ್ತು.

---

## ಎಂ.ಆರ್. ಮಂದಾರವಲ್ಲಿ

ಮೈಸೂರಿನಲ್ಲಿ ನೆಲೆಸಿರುವ ಮಂದಾರವಲ್ಲಿ ಶಿಕ್ಷಣಕ್ಷೇತ್ರದಲ್ಲಿ ಸಂಶೋಧಕಿ. ಮನುಷ್ಯ ಸಂಬಂಧ ಮತ್ತು ಕೌಟುಂಬಿಕ ಸೂಕ್ಷ್ಮಗಳನ್ನು ಅವರ ಕತೆಗಳು ದಾಖಲಿಸುತ್ತವೆ. 'ಗೊಂದಲಗಳ ನಾಡಿನಲ್ಲಿ', 'ಪರಿಸರ ಎಂದರೇನು?', 'ಯಾನ ಪ್ರತಿಯಾನ' ಇವು ಅವರ ವೈಚಾರಿಕ, ಸಾಂಸ್ಕೃತಿಕ ಬರಹಗಳ ಪುಸ್ತಕಗಳು. 'ಅಳುವುದಿಲ್ಲವೇ ವಸು' ಅವರ ಕತೆಗಳ ಸಂಗ್ರಹ. 'ಅಂಧಮಕ್ಕಳ ಅರಿವಿನಂಗಣ' ಅವರ ಸಂಶೋಧನಾತ್ಮಕ ಕೃತಿ.